# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 8-11-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಮುಂದಿನ ಮೇ ತಿಂಗಳೊಳಗೆ 6 ಮಿಲಿಯನ್ ಟನ್ ಸಕ್ಕರೆ ರಫ್ತಿಗೆ ಅವಕಾಶ

ಸರಕಾರ ಈ ಸೀಸನ್‌ನಲ್ಲಿ ಮುಂದಿನ ಮೇ ತಿಂಗಳೊಳಗೆ ಭಾರತದ ಸಕ್ಕರೆ ಮಿಲ್‌ಗಳಿಗೆ ಕೋಟಾದನ್ವಯ 6 ಮಿಲಿಯನ್ ಟನ್ ಸಕ್ಕರೆ ರಫ್ತಿಗೆ ಅವಕಾಶ ನೀಡಿದೆಯೆನ್ನಲಾಗಿದೆ. ಹಿಂದಿನ 3 ವರ್ಷಗಳ 18.27 ಶೇಕಡಾ ಸರಾಸರಿ ಉತ್ಪಾದನೆಯ ಏಕರೂಪ ರಫ್ತು ಕೋಟಾ ನಿಗದಿ ಪಡಿಸಿದೆಯೆನ್ನಲಾಗಿದೆ.

## ICE ಎಕ್ಸ್‌ಚೇಂಜ್ ಮಾರುಕಟ್ಟೆಗಳಿಗೆ ಅಧಿಕ ಪ್ರಮಾಣದ ಅರೆಬಿಕಾ ಕಾಫಿ ಆವಕ

ICE ಎಕ್ಸ್‌ಚೇಂಜ್ ನ ದಾಸ್ತಾನುಗಾರಗಳಿಗೆ ಅಧಿಕ ಪ್ರಮಾಣದ ಅರೆಬಿಕಾ ಕಾಫಿ ಆವಕವಾಗಲಿದೆಯೆನ್ನಲಾಗಿದೆ. 1 ಲಕ್ಷ ಚೀಲಗಳಿಗಿಂತ ಅಧಿಕ ಅರೆಬಿಕಾ ಕಾಫಿ ಆವಕವಾಗಲಿದೆಯೆನ್ನಲಾಗಿದ್ದು, ಈಗಾಗಲೇ ಒಂದು ವರ್ಷದ ಕನಿಷ್ಠ ಮಟ್ಟಕ್ಕೆ ದರ ಇಳಿಕೆಯಾಗಿದ್ದು ಹೆಚ್ಚಿನ ಆವಕ ದರದ ಮೇಲೆ ಪರಿಣಾಮ ಬೀರಬಹುದೆನ್ನಲಾಗಿದೆ. ಆದರೂ ಸಧ್ಯದ ICE ದಾಸ್ತಾನು ಮಟ್ಟ 23 ವರ್ಷಗಳ ಹಿಂದಿನ ಕನಿಷ್ಠ ಮಟ್ಟದಲ್ಲಿದೆಯೆನ್ನಲಾಗಿದೆ.

## ಹೊಸ ನೀರುಳ್ಳಿ ಆವಕ ವಿಳಂಬ, ದರ ಹೆಚ್ಚಳ ಸಾಧ್ಯತೆ

ಹೊಸಬೆಳೆಯ ನೀರುಳ್ಳಿ ನಿರಂತರ ಮಳೆಯಿಂದ ಹಲವಡೆ ಹೆಚ್ಚಿನ ಹಾನಿ ಸಂಭವಿಸಿದೆನ್ನಲಾಗಿದ್ದು ಆವಕ ಡಿಸೆಂಬರ್ ಉತ್ತರಾರ್ಧದಲ್ಲಿ ಪ್ರಾರಂಭವಾಗಬಹುದೆನ್ನಲಾಗಿದೆ. ಹೊಸಬೆಳೆಯ ವಿಳಂಬಿತ ಆವಕದಿಂದ ಹಾಗೂ ಮಳೆಯಿಂದ ಹೊಸಬೆಳೆಯ ನೀರುಳ್ಳಿಯ ಗುಣಮಟ್ಟ ವ್ಯತ್ಯಾಸದ ಸಾಧ್ಯತೆಯಿರುವುದರಿಂದ ಹಳೆಬೆಳೆಯ ನೀರುಳ್ಳಿ ಹಾಗೂ ಉತ್ತಮ ಗುಣಮಟ್ಟದ ನೀರುಳ್ಳಿ ದರ ಹೆಚ್ಚಳವಾಗುವ ಸಾಧ್ಯತೆಯಿದೆ.

## 2023 ರಲ್ಲಿ ಪಾಮೆಣ್ಣೆ ದರ ಇಳಿಕೆ

2023 ರಲ್ಲಿ ಪಾಮೆಣ್ಣೆ ದರ ಜಾಗತಿಕವಾಗಿ ಈಗಿರುವುದಕ್ಕಿಂತ ಇಳಿಕೆ ಯಾಗಲಿದೆಯೆಂದು ಇಂಡೋನೇಶಿಯಾದ ಪಾಮೆಣ್ಣೆ ಅಸೋಸಿಯೇಶನ್ GAPKI ಅಂದಾಜಿಸಿದೆ. 2.7 ರಿಂದ 2.9 ರ ಜಾಗತಿಕ ಆರ್ಥಿಕ ಹಿನ್ನಡೆಯಿಂದ ಬೇಡಿಕೆ ಇಳಿಕೆ, ಉತ್ಪಾದನೆ ಹೆಚ್ಚಳ ಮತ್ತಿತರ ಕಾರಣಗಳಿಂದ ದರ ಇಳಿಕೆಯಾಗಲಿದೆಯೆನ್ನಲಾಗಿದೆ. ಯುರೋಪ್ ಮತ್ತು ಚೈನಾಗಳಲ್ಲಿ ಆರ್ಥಿಕ ಹಿನ್ನಡೆ ಹೆಚ್ಚಳವಾಗುವುದರಿಂದ ಬೇಡಿಕೆ ಇಳಿಕೆಯಾಗಲಿದೆಯೆನ್ನಲಾಗಿದೆ. ಮಲೇಶೀಯನ್ ಪಾಮೆಣ್ಣೆ ಫ್ಯೂಚರ್ ದರ 3 ಅವಧಿಯ ನಂತರ 1 ಶೇಕಡಾ ಕ್ಕಿಂತ ಹೆಚ್ಚು ಇಳಿಕೆ ಕಂಡಿದೆ. ಈ ವರ್ಷ ಚೀನಾದ ಒಟ್ಟು ಪಾಮೆಣ್ಣೆ ಆಮದು ಇಳಿಕೆಯಾಗಿದೆಯೆನ್ನಲಾಗಿದೆ. ಈಗ ಚೀನಾದ ಕೋವಿಡ್ ನಿರ್ಬಂಧ ಸಡಿಲಿಕೆಯಾಗಿ ಅಲ್ಲಿಂದ ಹೆಚ್ಚಿನ ಬೇಡಿಕೆ ಬರಲಿದೆಯೆಂಬ ನಿರೀಕ್ಷೆಯಿಂದ ಪಾಮೆಣ್ಣೆ, ಸೋಯಾಬೀನ್ ಹಾಗೂ ಸೋಯಾಬೀನ್ ಎಣ್ಣೆ ದರಗಳು ಹಿಂದಿನ 4 ತಿಂಗಳ ಗರಿಷ್ಠ ಮಟ್ಟಕ್ಕೆ ಹೆಚ್ಚಳ ಕಂಡಿದೆಯೆನ್ನಲಾಗಿದೆ.

## ದಾಸ್ತಾನು ಮಿತಿ ಹಿಂತೆಗೆತ ನಂತರ ಸೋಯಾಬೀನ್ ದರ ಹೆಚ್ಚಳ

ದಾಸ್ತಾನು ಮಿತಿ ಹಿಂತೆಗೆತದ ನಂತರ ದೇಶೀ ಸೋಯಾಬೀನ್ ಮಾರುಕಟ್ಟೆ ದರ ಹಿಂದಿನ ತಿಂಗಳಿಗೆ ಹೋಲಿಸಿದಾಗ 12.4 ಶೇಕಡಾ ಹಾಗೂ ಹಿಂದಿನ ವಾರಕ್ಕಿಂತ 2.3 ಶೇಕಡಾ ಹೆಚ್ಚಳವಾಗಿದೆ. ಹಿಂದಿನ ನಾಲ್ಕೈದು ತಿಂಗಳಲ್ಲಿ ಇಳಿಕೆಯಾಗಿದ್ದ ದರ ಈ ಕ್ವಿಂಟಾಲ್‌ಗೆ 5000 ಕ್ಕಿಂತ ಮೇಲೆ ನಿಂತಿದೆ. ಜಾಗತಿಕ ದರಗಳು ಹೆಚ್ಚಳದಲ್ಲಿರುವುದರಿಂದ ದೇಶೀ ದರವೂ ಹೆಚ್ಚಳದಲ್ಲಿ ಮುಂದುವರಿಯುವ ಸಾಧ್ಯತೆಯಿದೆ.

## ರೈತರಿಂದ ಕ್ವಿಂ. ಗೆ ರೂ 2000 ಕ್ಕೆ ಮೆಕ್ಕೆ ಜೋಳ ನೇರ ಖರೀದಿ

ರೈತರಿಂದ ಮೆಕ್ಕೆ ಜೋಳ ವನ್ನು ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ ನೇರ ಖರೀದಿ ಮಾಡಲಿದೆಯೆನ್ನಲಾಗಿದೆ. ಪ್ರತಿ ಕ್ವಿಂ. ಗೆ ರೂ 2000 ಹಾಗೂ ಸಾಗಾಣಿಕಾ ಪ್ರೋತ್ಸಾಹ ಧನ ರೂ. 38 ರಂತೆ ಖರೀದಿಸಲಾಗುವುದೆನ್ನಲಾಗಿದೆ.

## ಉತ್ಪಾದನೆ ಇಳಿಕೆ ನೆಲಗಡಲೆ ದರ ಹೆಚ್ಚಳ

ಪ್ರಮುಖ ಉತ್ಪಾದಕ ರಾಜ್ಯವಾದ ಗುಜರಾತ್ ನಲ್ಲಿ ಬಿತ್ತನೆ ಪ್ರದೇಶದ ಇಳಿಕೆಯಿಂದ ಹಾಗೂ ಪ್ರತಿಕೂಲ ಹವಾಮಾನದಿಂದ ನೆಲಗಡಲೆ ಉತ್ಪಾದನೆ ಇಳಿಕೆಯಾಗಿದೆ. ಕರ್ನಾಟಕದಲ್ಲೂ ಪ್ರತಿಕೂಲ ಹವಾಮಾನದಿಂದ ಉತ್ಪಾದನೆ ಹಾಗೂ ಇಳುವರಿ ಕಡಿಮೆಯಾಗಿದೆಯೆನ್ನಲಾಗಿದೆ. ದರ ಹೆಚ್ಚಳ ವಾಗಲಾರಂಬಿಸಿದ್ದು, ಇನ್ನೂ ಹೆಚ್ಚಳವಾಗುವ ಸಾಧ್ಯತೆಯಿದೆ. ಹಾಗೇಯೇ ಇದರ ಉತ್ಪಾದನೆಗಳಾದ ನೆಲಗಡಲೆ ಎಣ್ಣೆ, ಹಿಂಡಿ ಇತ್ಯಾದಿಗಳ ದರಗಳೂ ಹೆಚ್ಚಳವಾಗಬಹುದು.